ಓಂ ಶಾಂತಿ, ಬಾಪ್‌ದಾದಾ, ಅವ್ಯಕ್ತ ಮುರಳಿ 03-10-1971.

***ನಿರ್ಮಾಣತೆಯ ಗುಣದಿಂದ ವಿಶ್ವ ನವನಿರ್ಮಾತ*** (निर्माणता के गुण से विश्व-निर्माता)

ಇಂದು ಬಾಪ್‌ದಾದಾ ಯಾರನ್ನು ನೋಡುತ್ತಿದ್ದಾರೆ, ತಾವು ಯಾರಾಗಿದ್ದೀರಿ? ಇಂದು ಬಾಪ್‌ದಾದಾ ತಮ್ಮನ್ನು ಯಾವ ರೂಪದಲ್ಲಿ ನೋಡುತ್ತಿದ್ದಾರೆ. ತಿಳಿದುಕೊಂಡಿದ್ದೀರಾ? ಮಾಸ್ಟರ್ ಜ್ಞಾನಪೂರ್ಣರಲ್ಲವೆ? ಮಾ॥ ಜ್ಞಾನಪೂರ್ಣರಾಗಿದ್ದೀರಿ ಅಂದಮೇಲೆ ತಂದೆಯು ಯಾವ ರೂಪದಲ್ಲಿ ನೋಡುತ್ತಿದ್ದಾರೆ ಎಂಬುದನ್ನು ತಿಳಿದುಕೊಳ್ಳಲು ಸಾಧ್ಯವಿಲ್ಲವೆ? ಮಕ್ಕಳಂತೂ ಆಗಿದ್ದೀರಿ ಆದರೆ ತಂದೆಯು ಯಾವ ರೂಪದಲ್ಲಿ ನೋಡುತ್ತಿದ್ದಾರೆ? ಎಲ್ಲರನ್ನು ವಿಶ್ವನಿರ್ಮಾತರ ರೂಪದಲ್ಲಿ ನೋಡುತ್ತಿದ್ದಾರೆ. ವಿಶ್ವ ನಿರ್ಮಾತರಾಗಿದ್ದೀರಾ? ತಂದೆಯ ಜೊತೆಜೊತೆಗೆ ತಂದೆಯ ಕರ್ತವ್ಯದಲ್ಲಿ ಸಹಯೋಗಿಗಳಾಗಿದ್ದೀರಾ? ಹೊಸವಿಶ್ವದ ನಿರ್ಮಾಣ ಮಾಡುವುದೇ ನಿಮ್ಮ ಕರ್ತವ್ಯವಾಗಿದೆಯಲ್ಲವೆ. ಅದೇ ಕರ್ತವ್ಯದಲ್ಲಿ ತೊಡಗಿದ್ದೀರೋ ಅಥವಾ ಈಗ ತೊಡಗಬೇಕಾಗಿದೆಯೋ? ಅಂದಮೇಲೆ ವಿಶ್ವನಿರ್ಮಾತ ರಾಗಿಲ್ಲವೆ? ಸದಾ ಇದು ಸ್ಮೃತಿಯಲ್ಲಿರಲಿ- ನಾವೆಲ್ಲರೂ ಮಾ||ವಿಶ್ವ ನಿರ್ಮಾತರಾಗಿದ್ದೇವೆ. ಇದೇ ಸ್ಮೃತಿ ಸದಾ ಇದ್ದಾಗ ಯಾವ ವಿಶೇಷ ಗುಣವು ತಾನಾಗಿಯೇ ಬರುವುದು? ನಿರ್ಮಾಣತೆಯ ಗುಣ, ತಿಳಿಯಿತೆ? ಎಲ್ಲಿ ನಿರ್ಮಾಣತೆ ಅರ್ಥಾತ್ ಸರಳತೆಯು ಸ್ವಾಭಾವಿಕ ರೂಪದಲ್ಲಿದೆಯೋ ಅಲ್ಲಿ ಅನ್ಯಗುಣಗಳೂ ಸಹ ತಾನಾಗಿಯೇ ಬಂದುಬಿಡುತ್ತವೆ ಆದ್ದರಿಂದ ಸದಾ ಈ ಸ್ಮೃತಿಸ್ವರೂಪದಲ್ಲಿ ಸ್ಥಿತರಾಗಿದ್ದು ನಂತರ ಪ್ರತೀ ಸಂಕಲ್ಪ ಹಾಗೂ ಕರ್ಮ ಮಾಡಿ. ಆಗ ಯಾವುದೆಲ್ಲಾ ಚಿಕ್ಕ-ಚಿಕ್ಕ ಮಾತುಗಳು ಎದುರಿಸಲು ಬರುತ್ತವೆಯೋ ಅವೆಲ್ಲಾ ಮಾತುಗಳು ಹೇಗೆ ಅನುಭವವಾಗುತ್ತದೆ ಎಂದರೆ- ಹೇಗೆ ವೃದ್ಧರ ಮುಂದೆ ಚಿಕ್ಕ-ಚಿಕ್ಕ ಮಕ್ಕಳು ತಮ್ಮ ಬಾಲ್ಯದ ಹುಡುಗಾಟಿಕೆಯ ಕಾರಣ ಏನನ್ನೇ ಮಾತನಾಡಲಿ ಅಥವಾ ಯಾವುದೇ ಅಂತಹ ಕರ್ತವ್ಯ ಮಾಡಿದರೂ ಸಹ ಇವರು ನಿರ್ದೋಷಿಗಳು, ಪಾಪ ಚಿಕ್ಕ ಮಕ್ಕಳು ಎಂದು ವೃದ್ಧರು ತಿಳಿದುಕೊಳ್ಳುತ್ತಾರೆ. ಅವರಮೇಲೆ ಪ್ರಭಾವ ಬೀರುವುದಿಲ್ಲ. ಹಾಗೆಯೇ ಯಾವಾಗ ಮಾಸ್ಟರ್ ವಿಶ್ವನಿರ್ಮಾತರೆಂದು ತಮ್ಮನ್ನು ತಿಳಿದುಕೊಳ್ಳುವಿರೋ ಆಗ ಮಾಯೆಯ ಚಿಕ್ಕ-ಚಿಕ್ಕ ವಿಘ್ನಗಳು ಮಕ್ಕಳ ಆಟವೆನಿಸುವುದು. ಹೇಗೆ ಚಿಕ್ಕಮಗು ಒಂದುವೇಳೆ ಹುಡುಗಾಟಿಕೆಯಲ್ಲಿ ಕಿವಿ, ಮೂಗು ಹಿಡಿದುಕೊಂಡರೂ ಸಹ ಕೋಪ ಬರುತ್ತದೆಯೇ? ಏಕೆಂದರೆ ಮಕ್ಕಳು ನಿರ್ದೋಷಿ ಬುದ್ಧಿಯಿಲ್ಲದವರೆಂದು ತಿಳಿದುಕೊಳ್ಳುತ್ತಾರೆ. ಅವರ ದೋಷವೇನೂ ಕಂಡುಬರುವುದಿಲ್ಲ. ಹಾಗೆಯೇ ಮಾಯೆಯೂ ಸಹ ಒಂದುವೇಳೆ ಯಾವುದೇ ಆತ್ಮನ ಮೂಲಕ ಸಮಸ್ಯೆ ಹಾಗೂ ವಿಘ್ನ ಅಥವಾ ಪರೀಕ್ಷೆಯಾಗಿ ಬಂದರೆ ಅಂತಹ ಆತ್ಮರನ್ನು ನಿರ್ದೋಷಿಗಳೆಂದು ತಿಳಿದುಕೊಳ್ಳಬೇಕು. ಮಾಯೆಯೇ ಆ ಆತ್ಮನ ಮೂಲಕ ತನ್ನ ಆಟವನ್ನು ತೋರಿಸುತ್ತಿದೆ ಅಂದಮೇಲೆ ನಿರ್ದೋಷಿಗಳನ್ನು ನೋಡಿ ಏನು ಅನಿಸುತ್ತದೆ? ದಯೆ, ಅನುಕಂಪ ಬರುತ್ತದೆಯಲ್ಲವೆ? ಇದೇರೀತಿ ಯಾವುದೇ ಆತ್ಮವು ನಿಮಿತ್ತನಾದರೂ ಸಹ ನಿರ್ದೋಷಿ ಆತ್ಮರೇ. ಒಂದುವೇಳೆ ಪ್ರತೀ ಆತ್ಮನನ್ನು ನಿರ್ದೋಷಿ ದೃಷ್ಟಿಯಿಂದ ನೋಡಿದ್ದೇ ಆದರೆ ಪುರುಷಾರ್ಥದ ಗತಿಯು ಎಂದಾದರೂ ಸಡಿಲವಾಗಲು ಸಾಧ್ಯವೇ? ಪ್ರತೀ ಸೆಕೆಂಡಿನಲ್ಲಿ ಏರುವಕಲೆಯ ಅನುಭವ ಮಾಡುತ್ತೀರಿ. ಕೇವಲ ಏರುವಕಲೆಯಲ್ಲಿ ಹೋಗಬೇಕೆಂದರೆ ಈ ತಿಳಿದುಕೊಳ್ಳುವ ಕಲೆ ಬರಬೇಕು.

16 ಕಲಾ ಸಂಪೂರ್ಣರಾಗಬೇಕಲ್ಲವೆ ಅಂದಮೇಲೆ ಇದೂ ಒಂದು ಕಲೆಯಾಗಿದೆ. ಒಂದುವೇಳೆ ಈ ಕಲೆಯನ್ನು ಅರಿತುಕೊಂಡರೆ ಅವರದು ಏರುವಕಲೆಯೇ. ಅವರ ಗತಿಯು ಎಂದೂ ನಿಧಾನವಾಗುವುದಿಲ್ಲ. ಪ್ರತೀ ಸೆಕೆಂಡಿನಲ್ಲಿ ತೀವ್ರತೆಯಿರುವುದು. ಇನ್ನೊಂದು ಮಾತೇನೆಂದರೆ ಈಗ ನಿಲ್ಲುವ ಸಮಯವಾದರೂ ಎಲ್ಲಿದೆ? ನಿಂತು ಆ ಆತ್ಮರ ಕಾರಣ ಹಾಗೂ ನಿವಾರಣೆಯನ್ನು ಪರಿಹರಿಸಲು ಈಗ ಸಮಯವಿದೆಯೇ? ಈಗಂತೂ ವೃದ್ಧರಾಗಿಬಿಟ್ಟಿದ್ದೀರಿ. ಈಗ ವಾನಪ್ರಸ್ಥ ಸ್ಥಿತಿಯಲ್ಲಿ ಹೋಗುವ ಸಮಯ ಸಮೀಪ ಬರುತ್ತಿದೆ. ತಮ್ಮ ಮನೆ ಸನ್ಮುಖದಲ್ಲಿ ಕಾಣಿಸುತ್ತಿಲ್ಲವೆ? ಕೊನೆಗೆ ಯಾತ್ರೆಯು ಸಮಾಪ್ತಿ ಮಾಡಿ ಮನೆಗೆ ಹೋಗಬೇಕಾಗಿದೆ. ಯಾವುದೇ ಮಾತು ಭಿನ್ನ-ಭಿನ್ನರೂಪಗಳಲ್ಲಿ ಭಿನ್ನ ಭಿನ್ನ ಮಾತುಗಳಿಂದ ಮುಂದೆ ಬಂದಾಗ ಮೊದಲು ತಿಳಿದುಕೊಳ್ಳಿರಿ- ಈ ಸಮಸ್ಯೆಗಳು ಹಾಗೂ

ಭಿನ್ನ-ಭಿನ್ನ ರೂಪದ ಮಾತುಗಳನ್ನು ಎಷ್ಟುಬಾರಿ ಪರಿಹಾರ ಮಾಡಿದ್ದೀರಿ ಮತ್ತು ಮಾಡುತ್ತಾ-ಮಾಡುತ್ತಾ ಅನುಭವಿಯಾಗಿದ್ದೀರಿ. ಎಷ್ಟುಬಾರಿಯ ಅನುಭವಿಯಾಗಿದ್ದೀರಿ, ನೆನಪಿದೆಯೇ? ಅನೇಕಬಾರಿ ಮಾಡಿದ್ದೀರಿ, ಇದು ನೆನಪು ಬರುತ್ತದೆಯೇ? ಕಲ್ಪದ ಮೊದಲೂ ಪಾರು ಮಾಡಿದ್ದೀರಿ ಮತ್ತು ಪಾಸ್ ಮಾಡಿದ್ದೀರಿ. ಪಾರು ಮಾಡಿದ್ದೀರಾ ಅಥವಾ ಮಾಡಿರಬಹುದಾ? ಒಂದುವೇಳೆ ಅನೇಕಬಾರಿ ಅನುಭವ ಮಾಡಿರದಿದ್ದರೆ ಇಂದು ಇಷ್ಟು ಸಮೀಪ ಹೇಗೆ ಬರುತ್ತಿದ್ದಿರಿ? ಇದು ಲೆಕ್ಕಮಾಡಲು ಬರುವುದಿಲ್ಲವೇ? ಪಾಂಡವರಂತೂ ಲೆಕ್ಕದಲ್ಲಿ ಬುದ್ಧಿವಂತರಾಗಬೇಕು ಆದರೆ ಶಕ್ತಿಯರು ನಂಬರ್‌ವನ್ ಆಗಿಬಿಟ್ಟಿದ್ದಾರೆ. ಈ ಸ್ಮೃತಿ ಸ್ಪಷ್ಟ ಹಾಗೂ ಸರಳರೂಪದಲ್ಲಿರಲಿ, ಕಷ್ಟದಿಂದ ನೆನಪು ತರುವಂತಾಗಬಾರದು. ಒಂದುವೇಳೆ ಕಲ್ಪದ ಹಿಂದಿನ ಮಾತನ್ನು ಈಗಲೂ ಬುದ್ಧಿಯಲ್ಲಿ ಕಷ್ಟಪಟ್ಟು ನೆನಪು ತರುತ್ತಾ ಇರುತ್ತೀರೆಂದರೆ ಏನು ಹೇಳುವರು? ಅವಶ್ಯವಾಗಿ ಯಾವುದೋ ಮಾಯೆಯ ಎಳೆದಾಟ ಈಗಲೂ ಇದೆ. ಆದ್ದರಿಂದ ಬುದ್ಧಿಯಲ್ಲಿ ಸ್ಮೃತಿಯನ್ನು ಎಳೆದು ತರಬೇಕಾಗುತ್ತದೆ. ಕಲ್ಪದ ಹಿಂದಿನ ಸ್ಮೃತಿ ಸ್ಪಷ್ಟ ಹಾಗೂ ಬರುವುದಿಲ್ಲ ಆದ್ದರಿಂದಲೇ ವಿಘ್ನಗಳನ್ನು ಪಾರು ಮಾಡುವುದರಲ್ಲಿ ಕಷ್ಟದ ಅನುಭವವಾಗುತ್ತದೆ. ವಾಸ್ತವದಲ್ಲಿ ಕಷ್ಟದ ಅನುಭವವೇನೂ ಇಲ್ಲ.

ಎಷ್ಟು ಪುರುಷಾರ್ಥದ ಸಮಯವು ನಡೆದಿದೆಯೋ, ಎಷ್ಟು ಜ್ಞಾನದ ಲೈಟ್ ಮತ್ತು ಮೈಟ್ ಸಿಕ್ಕಿದೆಯೋ ಅದರನುಸಾರ ವರ್ತಮಾನ ಸಮಯವು ಸರಳ ಹಾಗೂ ಸ್ಪಷ್ಟವಾಗಬೇಕು. ಎಷ್ಟು ಸ್ಪಷ್ಟವಾಗಬೇಕೆಂದರೆ ಹೇಗೆ ಒಂದುನಿಮಿಷದ ಮೊದಲು ಮಾಡಿರುವ ಕಾರ್ಯ ನೆನಪಿರುವುದೋ ಅಥವಾ ಮರೆತುಹೋಗುವುದೋ? ಅದೇರೀತಿ 5000 ವರ್ಷಗಳ ನಂತರ ಇಷ್ಟು ಸ್ಪಷ್ಟ ಅನುಭವವಾಗಲಿ. ಒಂದು ನಿಮಿಷದ ಮೊದಲು ಮಾಡಿರುವ ಕಾರ್ಯದಂತೆ, ಹೇಗೆ ಶಕ್ತಿಶಾಲಿ ಕ್ಯಾಮರಾ ಒಂದುಸೆಕೆಂಡಿನಲ್ಲಿ ಎಷ್ಟು ಸ್ಪಷ್ಟಚಿತ್ರವನ್ನು ತೆಗೆಯುತ್ತದೆ. ಎಷ್ಟೇ ದೂರದ ಚಿತ್ರವಿದ್ದರೂ ಸಹ ಸ್ಪಷ್ಟವಾಗಿ ಸನ್ಮುಖದಲ್ಲಿ ಬರತೊಡಗುತ್ತದೆ ಅಂದಮೇಲೆ ತಾವು ಪವರ್ ಫುಲ್ ಕ್ಯಾಮರಾಮೆನ್ ಆಗಿಲ್ಲವೆ? ಕ್ಯಾಮರಾ ಇದೆಯೇ ಅಥವಾ ಮತ್ತೊಬ್ಬರದನ್ನು ಲೋನ್ ಆಗಿ ತೆಗೆದುಕೊಂಡು ಉಪಯೋಗಿಸುತ್ತೀರಾ? ಶಕ್ತಿಶಾಲಿಯಾಗಿ ಇದೆಯೇ? ಕಲ್ಪದ ಹಿಂದಿನ ಚಿತ್ರವು ಅದರಲ್ಲಿ ಸ್ಪಷ್ಟವಾಗಿ ಬರುತ್ತದೆಯೇ? ಈ ಮನಸ್ಸು ಒಂದು ದೊಡ್ಡ ಕ್ಯಾಮರಾ ಆಗಿದೆ. ಇದರಲ್ಲಿ ಪ್ರತೀ ಸೆಕೆಂಡಿನ ಚಿತ್ರವನ್ನು ತೆಗೆಯಲು ಆಗುವುದಿಲ್ಲವೆ? ಕ್ಯಾಮರಾ ಅಂತೂ ಎಲ್ಲರ ಬಳಿಯಿದೆ ಆದರೆ ಕೆಲವೊಂದು ಕ್ಯಾಮರಾ ಸಮೀಪದ ಚಿತ್ರಗಳನ್ನು ತೆಗೆಯುತ್ತದೆ. ಇನ್ನೂ ಕೆಲವು ಕ್ಯಾಮರಾ ಚಂದ್ರನವರೆಗೂ ಚಿತ್ರವನ್ನು ತೆಗೆಯುತ್ತದೆ. ಅದು ಕ್ಯಾಮರಾ, ಇದೂ ಸಹ ಕ್ಯಾಮರಾ ಆಗಿದೆ. ಇಲ್ಲಿನ ಚಿಕ್ಕಪುಟ್ಟ ಕ್ಯಾಮರಾಗಳಂತೂ ಇವೆಯಲ್ಲವೆ ಅಂದಮೇಲೆ ಪ್ರತಿಯೊಬ್ಬರ ಬಳಿ ಎಷ್ಟು ಪವರ್‌ಫುಲ್ ಕ್ಯಾಮರಾ ಇದೆ? ಆ ವಿಜ್ಞಾನಿಗಳು ಚಂದ್ರಗ್ರಹದಿಂದ ಇಲ್ಲಿ ಮತ್ತು ಇಲ್ಲಿಂದ ಅಲ್ಲಿನ ಚಿತ್ರಗಳನ್ನು ಸೆಳೆಯುತ್ತಾರೆ ಅಂದಮೇಲೆ ತಾವು ಸಾಕಾರಲೋಕದಲ್ಲಿರುತ್ತಾ ನಿರಾಕಾರಿ ಪ್ರಪಂಚ, ಆಕಾರಿ ಪ್ರಪಂಚದ ಹಾಗೂ ಇಡೀ ಸೃಷ್ಟಿಯ ಭೂತಕಾಲದ ಹಾಗೂ ಭವಿಷ್ಯದ ಚಿತ್ರಗಳನ್ನು ತೆಗೆಯಲು ಆಗುವುದಿಲ್ಲವೆ? ಕ್ಯಾಮರಾವನ್ನು ಪವರ್‌ಫುಲ್' ಮಾಡಿಕೊಳ್ಳಿರಿ ಅದರಲ್ಲಿ ಯಾವ ದೃಶ್ಯ ಹೇಗಿದೆಯೋ ಅದೇರೀತಿ ಕಾಣಿಸಲಿ. ಭಿನ್ನ-ಭಿನ್ನರೂಪದಲ್ಲಿ ಕಾಣಿಸಬಾರದು. ಯಾವುದು ಹೇಗಿದೆಯೋ ಹಾಗೆಯೇ ಸ್ಪಷ್ಟವಾಗಿ ಕಾಣಲಿ. ಇದಕ್ಕೆ ಪವರ್‌ಫುಲ್ ಎಂದು ಹೇಳುತ್ತಾರೆ. ಆಗ ಸಮಸ್ಯೆಯ ರೂಪವೆನಿಸುವುದೋ ಅಥವಾ ಆಟವೆನಿಸುವುದೋ? ಆದ್ದರಿಂದ ಈಗಿನ ಸ್ಥಿತಿಯನುಸಾರ ಪವರ್‌ಫುಲ್ ಸ್ಥಿತಿಯನ್ನು ಮಾಡಿಕೊಳ್ಳಿರಿ ಆಗ ತೀವ್ರಪುರುಷಾರ್ಥಿ ಎಂದು ಹೇಳಲಾಗುವುದು. ಒಂದುವೇಳೆ ಕ್ಯಾಮರಾದ ಮೂಲಕ ಮೊದಲು ಚಿತ್ರವನ್ನು ತೆಗೆಯುತ್ತಾ ಹೋಗಿ, ಅದನ್ನು ತೊಳೆಸಿದ ನಂತರ ಹೇಗೆ ತೆಗೆದಿದ್ದೇವೆ ಎಂಬುದು ಅರ್ಥವಾಗುತ್ತಾ ಹೋಗುತ್ತದೆ. ಅದೇರೀತಿ ಇಡೀದಿನ ತಮ್ಮ-ತಮ್ಮ ಆಟೋಮೆಟಿಕ್ ಕ್ಯಾಮರಾದ ಮೂಲಕ ಅನೇಕಾನೇಕ ಚಿತ್ರಗಳನ್ನು ತೆಗೆಯುತ್ತಾ ಇರುತ್ತೀರಿ. ರಾತ್ರಿಯಲ್ಲಿ ಕುಳಿತು ಸ್ಪಷ್ಟವಾಗಿ ನೋಡಿಕೊಳ್ಳಿ- ಇಂದು ನಾನು ಯಾವ ಪ್ರಕಾರದ ಚಿತ್ರಗಳನ್ನು ಈ ಕ್ಯಾಮರಾದ ಮೂಲಕ ತೆಗೆದೆನು? ಹೇಗಿದೆಯೋ ಹಾಗೆಯೇ ಚಿತ್ರವನ್ನು ತೆಗೆದೆನೇ ಅಥವಾ ಸ್ವಲ್ಪ ಏರುಪೇರಾಯಿತೇ? ಕೆಲವೊಮ್ಮೆ ಕ್ಯಾಮರಾ ಸರಿಯಿಲ್ಲದಕಾರಣ ಬೆಳ್ಳಗಿನ ವಸ್ತುವೂ ಸಹ ಕಪ್ಪಾಗಿ ಕಾಣಿಸುತ್ತದೆ, ರೂಪ ಬದಲಾಗುತ್ತದೆ. ಮುಖವು ಕೆಲವೊಮ್ಮೆ ಡಬಲ್ ಆಗಿಬಿಡುತ್ತದೆ. ಹಾಗೆಯೇ ಇಲ್ಲಿಯೂ ಸಹ ಕೆಲಕೆಲವೊಮ್ಮೆ ಕ್ಯಾಮರಾ ಸರಿಯಿಲ್ಲದ ಕಾರಣ ಮಾತು ಸಮಸ್ಯೆಯಾಗಿಬಿಡುತ್ತದೆ. ಅದರ ರೂಪರೇಖೆ ಬದಲಾಗಿಬಿಡುತ್ತದೆ. ಅದರ ರಂಗುರೂಪ ಬದಲಾಗುತ್ತದೆ. ಕೆಲವೊಮ್ಮೆ ಯಥಾರ್ಥವಾಗಿರುವುದನ್ನು

ಅಯಥಾರ್ಥರೂಪದಲ್ಲಿಯೂ ಚಿತ್ರ ತೆಗೆಯಲ್ಪಡುತ್ತದೆ. ಆದ್ದರಿಂದ ಸದಾ ತಮ್ಮ ಕ್ಯಾಮರಾವನ್ನು ಸ್ವಷ್ಟ ಮತ್ತು ಪವರ್‌ಫುಲ್ ಮಾಡಿಕೊಳ್ಳಿ, ತಮ್ಮನ್ನು ಸೇವಾಧಾರಿ ಎಂದು ತಿಳಿಯುವುದರಿಂದ ತ್ಯಾಗ, ತಪಸ್ಸು ಎಲ್ಲವೂ ಬಂದುಬಿಡುತ್ತದೆ. ಸೇವಾಧಾರಿಯಾಗಿದ್ದೇನೆ ಮತ್ತು ಸೇವೆಗಾಗಿಯೇ ಈ ಜೀವನ ಇದೆ ಎಂದು ತಿಳಿದುಕೊಂಡಾಗ ಒಂದುಕ್ಷಣವೂ ಸೇವೆಯಿಲ್ಲದೇ ಹೋಗುವುದಿಲ್ಲ. ಆದ್ದರಿಂದ ಸದಾ ತಮ್ಮನ್ನು ಸೇವಾಧಾರಿ ಎಂದು ತಿಳಿದು ನಡೆಯಿರಿ ಮತ್ತು ತಮ್ಮನ್ನು ವೃದ್ಧರೆಂದು ತಿಳಿದುಕೊಳ್ಳಿರಿ. ಆಗ ಚಿಕ್ಕ-ಚಿಕ್ಕ ಮಾತುಗಳು ಆಟಿಕೆಯೆನಿಸುತ್ತದೆ. ದಯಾಹೃದಯಿಗಳಾಗುವಿರಿ. ತಿರಸ್ಕಾರದ ಬದಲು ಅನುಕಂಪ ಬರುವುದು. ಒಳ್ಳೆಯದು-

ಅವ್ಯಕ್ತ ಮುರಳಿ 03-10-1971.

***ನಿರ್ಮಾನತೆಯ ಗುಣದಿಂದ ವಿಶ್ವ ನಿರ್ಮಾಣ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ತಂದೆಗೆ ಮಗುವಾಗಿರುವ ಜ್ಞಾನ ಸ್ವರೂಪನು.

2. ನಾನು ತಂದೆಯೊಂದಿಗೆ ತಂದೆಯ ಕರ್ತವ್ಯದಲ್ಲಿ ತೊಡಗಿರುವ ಹೊಸ ಪ್ರಪಂಚ ಸ್ಥಾಪನಾ ಕರ್ತವ್ಯದಲ್ಲಿ ನಿಮಗ್ನವಾಗಿರುವ ಮಾಸ್ಟರ್ ವಿಶ್ವ ನಿರ್ಮಾತನು.

3. ನಾನು ನಿರ್ಮಾನತೆ ಮತ್ತು ಸರಳತೆಯನ್ನು ಧಾರಣೆ ಮಾಡಿ ಇತರ ಗುಣಗಳನ್ನು ಸ್ವತಹವಾಗಿ ಹೊಂದಿ, ಪ್ರತಿ ಸಂಕಲ್ಪ ಮತ್ತು ಕರ್ಮವನ್ನು, ಎದುರಿಸುವ ಪ್ರತಿ ವಿಷಯವನ್ನು ಚಿಕ್ಕ ಮಕ್ಕಳ ಆಟದಂತೆ ನೋಡಿದ್ದೇನೆ.

4. ನಾನು ಪ್ರತಿಯೊಬ್ಬ ಆತ್ಮನನ್ನು ನಿರ್ದೋಷಿಯಾಗಿ ಭಾವಿಸಿ ನನ್ನ ಪುರುಷಾರ್ಥದ ವೇಗವನ್ನು ಹೆಚ್ಚಿಸಿಕೊಂಡು ಪ್ರತಿ ಕ್ಷಣ ಏರುವಕಲೆಯನ್ನು ಅನುಭವ ಮಾಡಿಕೊಂಡಿರುವ 16 ಕಲಾ ಸಂಪೂರ್ಣ ಸ್ವರೂಪ.

5. ನಾನು ಕಲ್ಪಪೂರ್ವದ ವಿಷಯದ ಸ್ಮೃತಿಯನ್ನು ಸ್ಪಷ್ಟವಾಗಿ ಮತ್ತು ಸರಳವಾಗಿ ಅನುಭವ ಮಾಡಿಕೊಂಡಿರುವ ಸ್ಮೃತಿ ಸ್ವರೂಪ.

6. ನಾನು ಜ್ಞಾನದ ಪ್ರಕಾಶ ಮತ್ತು ಶಕ್ತಿಯಿಂದ ಕಲ್ಪಪೂರ್ವದ ಸ್ಮೃತಿಯನ್ನು ಸಹಜವಾಗಿ, ಸರಳವಾಗಿ, ಸ್ಪಷ್ಟವಾಗಿ ಮಾಡಿಕೊಂಡಿದ್ದೇನೆ.

7. ನಾನು ಸದಾ ಸ್ವಯಂ ಅನ್ನು ಸೇವಾಧಾರಿ, ಸೇವೆಗಾಗಿ ಈ ಜೀವನ ಮತ್ತು ಹಿರಿಯನು ಎಂದು ತಿಳಿದುಕೊಳ್ಳುವ ತ್ಯಾಗಿ ಮತ್ತು ತಪಸ್ವಿ.

8. ನಾನು ಮನಸ್ಸು ಎಂಬ ಕ್ಯಾಮರಾವನ್ನು ಸ್ವಷ್ಟ ಮತ್ತು ಶಕ್ತಿಶಾಲಿಯಾಗಿ ತಯಾರು ಮಾಡಿಕೊಂಡಿದ್ದೇನೆ